# ಚಂದ್ರಗಾವಿಯನುಟ್ಟು ದುಂಡು ಮುತ್ತನೆಕಟ್ಟಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 85
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 233
3. **Note:** Lyrics given without highlights are as per Ref. 1. The wordings given in green highlights are as per Ref. 2. Few differences are there in these two wordings.

ರಾಗ: ಆರಭಿ ತಾಳ: ಅಟ

ಚಂದ್ರಗಾವಿಯನುಟ್ಟು ದುಂಡು ಮುತ್ತನೆ ಕಟ್ಟಿ
ಪೆಂಡೆಯ ರುಳಿಯನಿಟ್ಟು
ಕೆಂದಾವಿನ ಹಾಲ ಹರವಿಯ ಹೊತ್ತುಕೊಂಡು
ಬಂದಾಳು ಬೀದಿಗಾಕೆ ॥ ಪ ॥

ಹಾಲು ಮಾರುವ ಧ್ವನಿ ಲಾಲಿಸಿ ರಂಗಯ್ಯ
ಮೇಲಿನ ಕೇರಿಯಲಿ
ನಾಳೆ ನಮ್ಮನೆಯಲಿ ವೀಳೆ-ಪುಸ್ತಗಳುಂಟು
ಹಾಲು ನಿಲ್ಲಿಸೆಂದನು ॥ 1 ॥

ಕೊಂಡವನು ನೀನಲ್ಲ ಡಂಭಕರ ಮಾತೇಕೊ
ಗಂಡನುಳ್ಳವಳ ಕೂಡ
ಮಂಡಲವಾಳುವ ಅರಸಿನ ಮುಂದೆ ಹೇಳಿ
ದಂಡವ ತೆರಸುವೆನೊ ॥ 2 ॥

ಅಡವಿ ಹಂಬುಗಳಿಗೆ ಹೆಡಿಗೆ ಸುಂಕವು ಇಲ್ಲ
ತಡೆದವ ನೀನಾರೊ?
ನಡೆ ಊರ ಮುಂದಕೆ ತಳವಾರರೈದಾರೆ

ಗಡನೆ ಪೇಳುವೆನೆಂದಳು ॥ 3 ॥

ಬಲ್ಲೆ ಬಲ್ಲೆನೆ ನಿನ್ನ ಬಗೆಯ ಮಾತುಗಳೆಲ್ಲ
ಎಲ್ಲಿಹ ತಳವಾರನೆ
ಅಲ್ಲದಿದ್ದರೆ ಬಂದು ವೀಳ್ಯವ ತಕ್ಕೊಂಡು
ಅಲ್ಲಲ್ಲಿ ದೂರದಿರೆ ॥ 4 ॥

ಕೋಲು ಕೈಯಲಿ ಪಣೆಯಲಿ ಸಿರಿನಾಮವು
ಆಲದ ಮರದಡಿಯೆ
ಕಾಲ ಮೊದಲು ಹಾಲ ಮಾರಿದ ಸುಂಕಕೆ
ನಿಲ್ಲೆಂದು ಸೆರಗ ಪಿಡಿದ ॥ 5 ॥

ಅಪ್ಪ ಸೆರಗ ಬಿಡೊ, ಅಣ್ಣ ಸೆರಗ ಬಿಡೊ
ಅಪ್ಪಯ್ಯ ಸೆರಗ ಬಿಡೊ
ಅಪ್ಪನು ನಾನಲ್ಲ, ಅಣ್ಣನು ಅಲ್ಲ ನಿ-
ಮ್ಮಪ್ಪನ ಅಳಿಯ ಕಾಣೆ ॥ 6 ॥

ಮಾವ ಸೆರಗ ಬಿಡೊ, ಭಾವ ಸೆರಗ ಬಿಡೊ
ಭಾವಯ್ಯ ಸೆರಗ ಬಿಡೊ
ಮಾವನು ನಾನಲ್ಲ, ಭಾವನು ನಾನಲ್ಲ
ಮಾವನ ಮಗನು ಕಾಣೆ ॥ 7 ॥

ಅಣ್ಣ ಸೆರಗ ಬಿಡೊ, ತಮ್ಮ ಸೆರಗ ಬಿಡೊ
ಅಣ್ಣಯ್ಯ ಸೆರಗ ಬಿಡೊ
ಅಣ್ಣಯ್ಯ ನಾನಲ್ಲ, ತಮ್ಮನು ಅಲ್ಲ ನಿ-
ಮ್ಮಣ್ಣನ ಭಾವ ಕಾಣೆ ॥ 8 ॥

ಕಂದ ಸೆರಗ ಬಿಡೊ, ತಂದೆ ಸೆರಗ ಬಿಡೊ
ಕಂದಯ್ಯ ಸೆರಗ ಬಿಡೊ
ಕಂದನು ನಾನಲ್ಲ, ತಂದೆಯು ನಾನಲ್ಲ

ಕಂದನ ತಂದೆ ಕಾಣೆ || 9 ||

ನೆತ್ತಿ ಮೇಲಿನ ಕೊಡ ಎತ್ತಿ ಈಡಾಡುತ
ಎತ್ತಿಕೊಂಡಳು ಕೃಷ್ಣನ
ಭಕ್ತರ ಸಲಹುವ ಪುರಂದರ ವಿಠಲ
ವತ್ಸ ವೆಂಕಟ ರಾಯನ || 10 ||

**Note:** The lyrics given here in green highlights are as per Ref. 2.

ರಾಗ: ಆರಭಿ ತಾಳ: ಅಟ

ಚಂದ್ರಗಾವಿಯನುಟ್ಟು ದುಂಡು ಮುತ್ತನೆ ಕಟ್ಟಿ ಪಿಂಡ್ಯಾದ ರುಳಿಯನಿಟ್ಟು
ಕೆಂಗಾವಿನ ಹಾಲ ಹರವಿಯೊಳಿಟ್ಟುಕೊಂಡು ಬಂದಳೆ ಕೇರಿಗಾಗಿ || ೧ ||

ಸಂಜೆ ರಾಗವನುಟ್ಟು ಸಂಜನೋಲೆಯನಿಟ್ಟು ಪಂಜರದರಗಿಣಿಯ
ಅಂಜಲಿ ಮೇಲಿಟ್ಟು ಮುದ್ದನಾಡುತ ರಂಗನಿದ್ದ ಕೇರಿಗೆ ಬಂದಳು || ೨ ||

ಹಾಲ ಕೊಳ್ಳಿರೆಂದು ಸಾರಿದಳೀ ಬಾಲೆ ಕೇರಿ ಕೇರಿಯೊಳಗೆ
ಬಾಲ ಸ್ತ್ರೀ ಪುರುಷರು ಲಾಲಿಸಿ ಕೇಳ್ದರು ಹಾಲಿನ ಬೆಲೆಗಳನು || ೩ ||

ಹಾಲು ಮಾರುವ ಧ್ವನಿಯಾಲಿಸಿ ರಂಗಯ್ಯ ಮೇಲಿನ ಕೇರಿಯೊಳು
ನಾಳೆ ನಮ್ಮನೆಯಲಿ ಪ್ರಸ್ತ ವೀಳ್ಯಗಳುಂಟು ಹಾಲೆನ್ನ ಇರಿಸೆಂದನು || ೪ ||

ಕೊಂಬವ ನೀನಲ್ಲ ಡಂಭಕತನವೇತಕೊ ಗಂಡನುಳ್ಳವಳು ನಾನು, ಭೂ
ಮಂಡಲದೊಳಗುಳ್ಳ ಅರಸರ ಕೂಡ್ವೇಳಿ ದಂಡ ತರಿಸುವೆನೆಂದಳು || ೫ ||

ಬಾಲೆ ಮಾನಿನಿರನ್ನೆ ಲೋಲಾಕ್ಷಿ ಲಾಲಿಸೆ ಈಗ ನಾ ನುಡಿವ ಮಾತ
ಹಾಲಿನ ಬೆಲೆ ಹೇಳೆ ಏನು ಮಾನಿನಿರನ್ನೆ ಬೇಡಿದ್ದ ಕೊಡುವೆನೆಂದ || ೬ ||

ಏಕೆಲವೊ ಇಂಥ ಪುಂಡತನವು ಸಲ್ಲ ಕಮಲಜಾತಜನಕ
ನಾ ಕಾಯಿಸಿದ ಒಳ್ಳೆ ಎಮ್ಮೆಯ ಹಾಲಿದು ಒಮ್ಮನೆ ಹೊನ್ನೆಂದಳು || ೭ ||

ಕೈಯಲ್ಲಿ ಕೊಳಲು ನೊಸಲ ನೀಳದ ನಾಮ ಆಲದ ಮರನಡಿಯೆ
ಬಾಲೆ ಮೊದಲು ಹಾಲ ಮಾರಿದ ಸುಂಕಕೆ ನೀಲ ಸೆರಗ ಪಿಡಿದ || ೮ ||

ಅಡವಿಗಂಕೆಗಳಿಲ್ಲ ಕೊಡಕೆ ಸುಂಕಗಳಿಲ್ಲ ತಡೆವವ ನೀನಾರೆಲೊ
ನಡೆ ಊರ ಮುಂದಕ್ಕೆ ತಳವಾರರೊಯ್ವರೆ ಹದನ ಪೇಳುವೆನೆಂದಳು || ೯ ||

ಬಲ್ಲೆ ಬಲ್ಲೆನು ನಿನ್ನ ಬಗೆಯ ಮಾತುಗಳೆಲ್ಲ ಎಲ್ಲಿಯ ತಳವಾರರೆ
ಹಾಗಲ್ಲದಿದ್ದರೆ ಒಂದು ವೀಳ್ಯವ ತೆಕ್ಕೊಂಡು ಅಲ್ಲಲ್ಲಿ ದೂರದಿರೆ || ೧೦ ||

ಕೆಟ್ಟನಲ್ಲೊ ಕೃಷ್ಣ ಇತ್ತಲೇತಕೆ ಬಂದೆ ಅತ್ತೆ ಮಾವಂದಿರುಂಟು
ಬಿಟ್ಟು ಬಿಡುವರೆನ್ನ, ಸರಸವಾಡಲು ಸಲ್ಲ, ಕಟ್ಟಿ ಕೊಂಬೆನು ಕಾಲನು || ೧೧ ||

ಮಾನಿನಿಮಣಿ ಕೇಳೇ ನಾಗಸಂಪಿಗೆ ಹೂವ ಜಾಣರು ಬಿಡುವರೇನೆ
ಜಾಣತನದ ಮಾತು ಆಡೋದು ತರವಲ್ಲ ಏಣಾಕ್ಷಿ ಲಾಲಿಪುದು || ೧೨ ||

ಹೊತ್ತು ಹೋಯಿತು ರಂಗ ಇನ್ನಾರಿಗ್ಹೇಳಲಿ ಅತ್ತಿಗೆ ಮೈದುನರು
ಮತ್ತೆ ನಿನ್ನೊಡನಾಡುವುದ ಕೇಳ್ದರೆ ಕುಟ್ಟಿ ಎನ್ನ ಕೆಡವರೆಂದಳು || ೧೩ ||

ದುಂಡು ಮಲ್ಲಿಗೆ ಹೂವ ಕಂಡರೆ ಬಿಡುವರೆ ಪುಂಡರೀಕಾಕ್ಷಿ ಕೇಳು
ದಂಡಿಸದಿರು ಎನ್ನ ಅಂಡಲಿಸಲು ಬೇಡ ಗಂಡನೊಡನೆ ನುಡಿದು || ೧೪ ||

ಏತಕಿನಿತು ಛಲ ಎನ್ನೊಳಗೀ ಪರಿ ಮಾತುಳಾಂತಕ ಕೃಷ್ಣಯ್ಯ
ಮಾತು ಮಾತಿಗೆ ಈ ಪರಿಯಿದು ತರವಲ್ಲ ಬಿದ್ದರೆ ಅರಿತನವ || ೧೫ ||

ಕಣ್ಣಿಲಿ ಕಂಡ ಮೇಲಿದ ಬಿಡುವವರುಂಟೆ ಎಣ್ಣಿಸ ಬೇಡ ನೀನು
ಬೆಣ್ಣೆ ಕಳ್ಳನು ಕೃಷ್ಣ ಕಣ್ಣ ಸನ್ನೆಯ ಮಾಡಿ ಹೆಣ್ಣ ಮೋಹಿಸುತಿದ್ದನು || ೧೬ ||

ಅಪ್ಪ ಸೆರಗ ಬಿಡೊ, ಅಣ್ಣ ಸೆರಗ ಬಿಡೊ, ಅಪ್ಪಯ್ಯ ಬಿಡು ಸೆರಗ
ಅಪ್ಪನು ನಾನಲ್ಲ, ಅಣ್ಣನು ನಾನಲ್ಲ, ನಿನ್ನಪ್ಪನ ಅಳಿಯ ಕಾಣೆ || ೧೭ ||

ಮಾವ ಸೆರಗ ಬಿಡೊ, ಭಾವ ಸೆರಗ ಬಿಡೊ, ಮಾವಯ್ಯ ಬಿಡು ಸೆರಗ
ಮಾವನು ನಾನಲ್ಲ, ಭಾವನು ನಾನಲ್ಲ, ನಿನ್ನ ಮಾವನ ಮಗನು ಕಾಣೆ || ೧೮ ||

ಕಂದ ಸೆರಗ ಬಿಡೊ, ತಂದೆ ಸೆರಗ ಬಿಡೊ, ಕಂದಯ್ಯ ಬಿಡು ಸೆರಗ
ಕಂದನು ನಾನಲ್ಲ, ತಂದೆಯು ನಾನಲ್ಲ, ನಿನ್ನ ಕಂದನ ತಂದೆ ಕಾಣೆ || ೧೯ ||

ನೆತ್ತಿ ಮೇಲಿನ ಕೊಡ ಎತ್ತಿ ನೀಡಾಡಲು ಅಪ್ಪಿಕೊಂಡಳೆ ಕೃಷ್ಣನ
ಭಕ್ತರ ಸಲಹುವ ಪುರಂದರ ವಿಠಲನ ಚಿಕ್ಕ ವೆಂಕಟರಾಯನ || ೨೦ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋವಳಿತಿಯೊಬ್ಬಳು ಮಾರುಕಟ್ಟೆಗೆಬಂದು ಹಾಲ ಹರವಿಯನ್ನು ಹೊತ್ತುಕೊಂಡು ಕೇರಿಯಲ್ಲಿ ಬಂದಾಗ, ಕೃಷ್ಣನು ಅವಳನ್ನು ಕಂಡು ಮಾತನಾಡುತ್ತಾನೆ.

**ಚಂದ್ರಗಾವಿ** = ಚಂದ್ರ + ಕಾವಿ = ಕಿತ್ತಳೆ ಬಣ್ಣದ ಸೀರೆ

**ರುಳಿ** = ಸರಪಳಿ

**ಹರವಿ** = ಮಣ್ಣಿನ ಪಾತ್ರೆ

**ವೀಳೆಪ್ರಸ್ತ** = ನಿಶ್ಚಯ ಕಾರಣ

**ಅಂಜಲಿ** = ಅಂಜುಲಿ, ಬೊಗಸೆ, ಬೊಗಸೆಯಳತೆ

**ಮಂಡಲವಾಳುವ** = ಮಂಡಲೇಶ್ವರನಾದ

**ಹಂಬು** = ಬಳ್ಳಿ

**ಹೆಡಿಗೆ** = ಬಿದುರಿನ ಬುಟ್ಟಿ

**ಸುಂಕ** = ತೆರಿಗೆ

**ಹದನ** = ಸಂಗತಿ, ಸುದ್ದಿ, ಸಮಾಚಾರ, ಪ್ರಸಂಗ

**ತಳವಾರ** = ಕಾವಲುಗಾರ

**ಗಡನೆ** = ಬೇಗನೆ

**ಕಾಲ ಮೊದಲು** = ಈ ಮೊದಲು

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** ranga, Krishna, muttu, halu, keri, pati, arasi, kaadu, ooru, seragu, tande, anna, maga, koosu, srinivasa, gili, Aladele, benne, gopi, kalla, hennu, emme,
**Pravachana:** NA
**Explanation:** NA